# ಧನಂಜಯ್ ಈಗ ಜಯರಾಜ್

'ಜಯರಾಜ್' ಈ ಹೆಸರನ್ನು ಕೇಳಿದರೆ ಬೆಂಗಳೂರಿನ ಪುಡಿ ರೌಡಿಗಳ ಎದೆಯಲ್ಲಿ ಈಗಲೂ ಸಣ್ಣ ನಡುಕ ಹುಟ್ಟಿಕೊಳ್ಳುತ್ತದೆ. ರೌಡಿಸಂ ಮತ್ತು ರಾಜಕೀಯ ಎರಡೂ ಬೆರೆತ ಬದುಕು ಆತನದು. ಜನಪ್ರಿಯ ಮುಖ್ಯಮಂತ್ರಿ ದೇವರಾಜ ಅರಸು ಮತ್ತು ಅಂದಿನ ಕಾಲದ ಡಾನ್ ಜಯರಾಜ್ ನಡುವಿನ ಸಂಬಂಧದ ಕುರಿತೂ ಹಲವು ಕಥೆಗಳಿವೆ.

ಜಯರಾಜ್ ಎಪ್ಪತ್ತರ ದಶಕದ ಮಧ್ಯದಲ್ಲಿ ರೋಚಕವಾಗಿ ಬದುಕಿ, ಸಾಕಷ್ಟು ಮೆರೆದು ಸಂದುಹೋದ ವ್ಯಕ್ತಿ. ಹೊಸ ತಲೆಮಾರಿಗೆ ಆತನ ಹೆಸರು ಕೇಳಿ ಗೊತ್ತೇ ಹೊರತು ಅವನ ಮೆರೆದಾಟದ ಕಥೆಗಳು ಹೆಚ್ಚು ಗೊತ್ತಿಲ್ಲ. ಅದನ್ನು ತೆರೆಯ ಮೇಲೆ ತರುವ ಪ್ರಯತ್ನ ಮಾಡುತ್ತಿದ್ದಾರೆ ಅಗ್ನಿ ಶ್ರೀಧರ್.

ಕೆಲವು ಕಾಲದ ನಂತರ ಅಗ್ನಿ ಶ್ರೀಧರ್ ಮತ್ತೆ ಸಿನಿಮಾದಲ್ಲಿ ತೊಡಗಿಕೊಳ್ಳುತ್ತಿದ್ದಾರೆ. ಅಗ್ನಿ ಶ್ರೀಧರ್ ಕೂಡ ಬೆಂಗಳೂರಿನ ಭೂಗತಲೋಕದ ಆಳ ಅಗಲಗಳನ್ನು ಅರಿತವರು. ಅಲ್ಲಿನ ಕ್ರೌರ್ಯವನ್ನೂ, ದುರಂತವನ್ನೂ ಕಣ್ಣಾರೆ ಕಂಡವರು. ಈಗ ಜಯರಾಜ್ ಬದುಕನ್ನು ಆಧರಿಸಿದ ಸಿನಿಮಾ ಮಾಡಲು ಹೊರಟಿದ್ದಾರೆ.

ಶ್ರೀಧರ್ ಈ ಚಿತ್ರವನ್ನು ನಿರ್ದೇಶಿಸುತ್ತಿಲ್ಲ. ಬದಲಿಗೆ ಕಥೆ ಮತ್ತು ಚಿತ್ರಕಥೆ ಬರೆಯುವ ಜವಾಬ್ದಾರಿಯನ್ನು ಅವರು ಹೊತ್ತಿದ್ದಾರೆ. ಶೂನ್ಯ ಎಂಬವರು ಈ ಚಿತ್ರಕ್ಕೆ ಆ್ಯಕ್ಷನ್ – ಕಟ್ ಹೇಳುತ್ತಿದ್ದಾರೆ. ಆಶು ಬೇದ್ರ ಈ ಚಿತ್ರಕ್ಕೆ ಹಣ ಹೂಡುತ್ತಿದ್ದಾರೆ. ಜಯರಾಜ್ ಬದುಕಿನ ಕಥೆ ಎಂದಾಕ್ಷಣ ಆ ಪಾತ್ರವನ್ನು ಯಾರು ಮಾಡುತ್ತಾರೆ ಎಂಬ ಪ್ರಶ್ನೆ ಸಹಜ. ಆ ಪ್ರಶ್ನೆಗೂ ಈಗ ಉತ್ತರ ಸಿಕ್ಕಿದೆ. ಡಾಲಿ ಧನಂಜಯ್, ಜಯರಾಜ್ ಪಾತ್ರಕ್ಕೆ ಜೀವ ತುಂಬಲಿದ್ದಾರೆ. 'ಟಗರು' ಸಿನಿಮಾದ ನಂತರ ವಿಲನ್ ಪಾತ್ರಗಳಲ್ಲಿಯೇ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವ ಧನಂಜಯ್ ವೃತ್ತಿಬದುಕಿನಲ್ಲಿ ಇದೊಂದು ಮಹತ್ವದ ಚಿತ್ರ ಎನ್ನುವಲ್ಲಿ ಎರಡು ಮಾತಿಲ್ಲ. 2020ರಲ್ಲಿಯೇ ಈ ಚಿತ್ರವನ್ನು ಮುಗಿಸಿ ತೆರೆಯ ಮೇಲೆ ತರಲು ಚಿತ್ರತಂಡ ಉದ್ದೇಶಿಸಿದೆಯಂತೆ.





# ಮೊಟ್ಟೆ ಶೆಟ್ಟರ ಹೊಸ ಗಮನ

ಮೊಟ್ಟೆ ಶೆಟ್ಟರು ಮತ್ತೆ ಅಖಾಡಕ್ಕಿಳಿದಿದ್ದಾರೆ! ಮೊಟ್ಟೆ ಶೆಟ್ಟರು ಎಂದರೆ ಯಾರು ಎಂದು ತಿಳಿಯಿತಲ್ಲ. 'ಒಂದು ಮೊಟ್ಟೆಯ ಕಥೆ' ಎಂಬ ತಮ್ಮ ಮೊದಲ ಸಿನಿಮಾ ಮೂಲಕವೇ ಸಾಕಷ್ಟು ಜನಪ್ರಿಯತೆ ಗಳಿಸಿದ್ದ ರಾಜ್ ಬಿ. ಶೆಟ್ಟಿ ಬಗ್ಗೆ ಹೇಳುತ್ತಿರುವುದು.

ತಮ್ಮ ಮೊದಲ ಸಿನಿಮಾ ನಂತರ ನಟನೆಯಲ್ಲಿ ಬ್ಯುಸಿ ಆಗಿಬಿಟ್ಟಿದ್ದರು. ವಿಭಿನ್ನ ಪ್ರಯತ್ನದಿಂದ ಗಮನಸೆಳೆದಿದ್ದ ಅವರು ನಿರ್ದೇಶನವನ್ನು ಕೈಬಿಟ್ಟರಾ ಎಂಬ ಸಂದೇಹವೂ ಕಾಡಿತ್ತು. ಆದರೆ ಆ ಊಹೆಯನ್ನು ಸುಳ್ಳುಮಾಡುವ ಸುದ್ದಿಯೊಂದನ್ನು ಅವರು ಕಳೆದ ಫೆ. 14ರಂದು ಪ್ರೇಮಿಗಳ ದಿನವೇ ಕೊಟ್ಟಿದ್ದಾರೆ. ಅದು ತಮ್ಮ ನಿರ್ದೇಶನದ ಹೊಸ ಸಿನಿಮಾ ಕುರಿತ ಸುದ್ದಿ.

'ಗರುಡ ಗಮನ ವೃಷಭ ವಾಹನ' ಇದು ಅವರ ನಿರ್ದೇಶನದ ಎರಡನೇ ಸಿನಿಮಾದ ಹೆಸರು. ಎಲ್ಲ ಪ್ರಾಣಿಗಳೇ ಇವೆಯಲ್ಲ, ಇದೇನು ವೈಲ್ಡ್‌ಲೈಫ್ ಚಿತ್ರವೇ ಎಂದು ಅನುಮಾನವೂ ಮೂಡಬಹುದು. ಆದರೆ ಇದು ಮನುಷ್ಯನ ಮನಸ್ಸಿನೊಳಗಿನ ಕಾಡಿನ ಕುರಿತು ಹೇಳುವ ಸಿನಿಮಾವಂತೆ. ಈ ಸೂಚನೆ ಚಿತ್ರದ ಪೋಸ್ಟರ್‌ನಲ್ಲಿಯೂ ಇದೆ.

ನಿರ್ದೇಶನದ ಜೊತೆಗೆ ತಾವೂ ಒಂದು ಮುಖ್ಯಪಾತ್ರದಲ್ಲಿ ನಟಿಸಿದ್ದಾರೆ ರಾಜ್. ಅವರ ಜೊತೆಗೆ ರಿಷಬ್ ಶೆಟ್ಟಿ ಅವರೂ ಮತ್ತೊಂದು ಮುಖ್ಯಪಾತ್ರದಲ್ಲಿ ನಟಿಸಿರುವುದು ವಿಶೇಷ. ಪೋಸ್ಟರ್‌ನಲ್ಲಿ ರಾಜ್ ಮತ್ತು ರಿಷಬ್ ಅವರ ಅರ್ಧರ್ಧ ಮುಖಗಳನ್ನು ಕತ್ತರಿಸಿ ಜೋಡಿಸಲಾಗಿದೆ. ನೀಲಿ ಮತ್ತು ಕೆಂಪು ಬಣ್ಣಗಳ ಕಾಂಬಿನೇಷನ್ ನಡುವೆ ಒಂದಿಷ್ಟು ಅಂತರವೂ ಇದೆ.

ಪ್ರೇಮಿಗಳ ದಿನವೇ ಬಿಡುಗಡೆಯಾಗಿದ್ದರೂ ಈ ಚಿತ್ರದ ಪೋಸ್ಟರ್‌ನಲ್ಲಿ ಪ್ರೇಮ್ ಕಹಾನಿಯ ಕಿಂಚಿತ್ ಸುಳಿವೂ ಇಲ್ಲ. ಒಂದು ಮೂಲದ ಪ್ರಕಾರ ಈ ಚಿತ್ರಕ್ಕೆ ನಾಯಕಿಯೇ ಇಲ್ಲವಂತೆ! ಇದೊಂದು ಗ್ಯಾಂಗ್‌ಸ್ಟರ್ ಸ್ಟೋರಿ ಎಂಬುದು ರಾಜ್ ಆಪ್ತಬಳಗದವರು ನೀಡುವ ಸೂಚನೆ. ಗೋಪಾಲಕೃಷ್ಣ ದೇಶಪಾಂಡೆ ಕೂಡ ಈ ಚಿತ್ರದ ಪಾತ್ರವೊಂದರಲ್ಲಿ ನಟಿಸಿದ್ದಾರೆ.

ಈಗಾಗಲೇ ಚಿತ್ರೀಕರಣ ಮುಗಿದಿದ್ದು, ಜೂನ್ ತಿಂಗಳಲ್ಲಿ ಚಿತ್ರ ತೆರೆಗೆ ತರಲು ಯೋಜನೆ ಹಾಕಿಕೊಂಡಿದ್ದಾರೆ. ಮಿಥುನ್ ಮುಕುಂದನ್ ಈ ಚಿತ್ರಕ್ಕೆ ಸಂಗೀತ ನೀಡಿದ್ದಾರೆ.